

ಈಸ್ಟರ್ ಐಲ್ಯಾಂಡ್‌ನ ರಕ್ಷಕರು ಎಂದು ಅಲ್ಲಿನ ಜನ ನಂಬಿರುವ 'ಮೋಯ್'ಗಳು



ಪ್ರದೇಶ ಈಸ್ಟರ್ ಐಲ್ಯಾಂಡ್. ಜೇನುನೊಣಗಳಿಗೆ ಯಾವ ಸಮಸ್ಯೆಯೂ ಆಗದಂತೆ ಇಲ್ಲಿನ ಜೇನು ಕೃಷಿಕರು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಇಲ್ಲಿನ ಜೇನುನೊಣಗಳ ಮೇಲೆ ಯಾವುದೇ ಪ್ರಭಾವ ಬೀರದಂತೆ ಇತರೆ ಪ್ರದೇಶಗಳ ಜೇನುನೊಣಗಳನ್ನು ಇಲ್ಲಿಗೆ ತರಬಾರದೆಂದು ಸ್ಥಳೀಯ ಸರ್ಕಾರವನ್ನೂ ಇಲ್ಲಿನ ಕೃಷಿಕರು ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವೆಲ್ಲವೂ ಇಲ್ಲಿ ಅಪ್ಪಟ ಜೇನುತುಪ್ಪ ಉತ್ಪಾದನೆಯನ್ನು ಸಾಧ್ಯವಾಗಿಸಿದೆ.

## ಕೃಷಿಕರ ಶ್ರಮಕ್ಕೆ ಪ್ರಕೃತಿಯ ಸಹಕಾರ

ಈ ಪ್ರದೇಶದಲ್ಲಿನ ಜೇನುನೊಣಗಳು ಆರೋಗ್ಯವಾಗಿರುವುದಕ್ಕೆ ಇಲ್ಲಿನ ಕೃಷಿಕರ ಬೇಸಾಯ ಪದ್ಧತಿಯೇ ಕಾರಣ. ಇವರು ಯಾವುದೇ ರಾಸಾಯನಿಕ ಬಳಸದೇ ಕೃಷಿಯಲ್ಲಿ ತೊಡಗಿದ್ದಾರೆ. ಇದಕ್ಕಾಗಿ ಹಲವು ಪುರಾತನ ಬೇಸಾಯ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಪ್ರಕೃತಿಯ ವರ ಎಂಬಂತೆ ಇಲ್ಲಿಯ ಹರಿಯುವ ನೀರು ಸಹಜ ಸ್ವಚ್ಛವಾಗಿದೆ. ನೀರಿನ ಅಗತ್ಯ ಬಿದ್ದರೆ ಸಮಸ್ಯೆ ಎದುರಾಗಬಹುದೆಂದು ಮಳೆ ನೀರನ್ನು ಸಂಗ್ರಹಿಸಿ ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿನ ಜಲಮೂಲಗಳು ಉತ್ತಮವಾಗಿರುವುದರಿಂದ ಜೇನುನೊಣಗಳೂ ಆರೋಗ್ಯವಾಗಿವೆ ಎಂಬುದು ಸ್ಥಳೀಯರ ಅಭಿಪ್ರಾಯ.

ಇದರಿಂದ ಜೇನು ಸಾಕಾಣಿಕೆದಾರರಿಗೆ ಹೆಚ್ಚುವರಿಯಾಗಿ ಆ್ಯಂಟಿಬಯೊಟಿಕ್ಸ್‌ನಂತಹ ಔಷಧಗಳನ್ನು ಜೇನುನೊಣಗಳಿಗಾಗಿ ಬಳಸಬೇಕಾದ ಅಗತ್ಯವೂ ಇಲ್ಲದಾಗಿದೆ. ಜೊತೆಗೆ, ದ್ವೀಪದ ವಾತಾವರಣ ಹೆಚ್ಚು ತೇವಾಂಶದಿಂದ ಕೂಡಿರುವುದರಿಂದ ಜೇನುತುಪ್ಪದಲ್ಲಿ ಹೆಚ್ಚು ದ್ರವಸ್ಥಿರತ್ವ ಕೂಡ ಇರುತ್ತದೆ.

## ಸಂಶೋಧನೆಗಳು ಹೇಳುವುದೇನು?

ಇಲ್ಲಿನ ಜೇನುನೊಣಗಳು ವಿಶ್ವದ ಇತರೆ ಜೇನುನೊಣಗಳಿಗಿಂತ ಭಿನ್ನವೇ ಎಂಬ ಕುರಿತು ಸಂಶೋಧಕರು ಅಧ್ಯಯನ ಮಾಡಿದ್ದಾರೆ. ಈ ಸಂಶೋಧನೆಯಲ್ಲಿ ಕೆಲವು ಆಸಕ್ತಿಕರ ಅಂಶಗಳು ಬೆಳಕಿಗೆ ಬಂದಿವೆ. ವಿಶ್ವದ ಬೇರೆ ಬೇರೆ ತಳಿಯ ಜೇನುನೊಣಗಳಿಗೂ ಇಲ್ಲಿಯ ಜೇನುನೊಣಗಳಿಗೂ ಸಾಕಷ್ಟು ವ್ಯತ್ಯಾಸವಿರುವುದು ತಿಳಿದುಬಂದಿದೆ. ಇವುಗಳ ಪರಾಗಸ್ಪರ್ಶ ಕ್ರಿಯೆಯೂ ಭಿನ್ನವಾಗಿದೆ ಎಂಬುದನ್ನು ಅಧ್ಯಯನಗಳು ತೋರಿಸಿವೆ.

ಇಲ್ಲಿನ ಜೇನುನೊಣಗಳು ಆರೋಗ್ಯಕರವಾಗಿರುವುದಷ್ಟೇ ಅಲ್ಲದೇ ಇವುಗಳ ಉತ್ಪಾದನಾ ಸಾಮರ್ಥ್ಯವೂ ಅಧಿಕವಿದೆ. ಈ ದ್ವೀಪದ ಆಹ್ಲಾದಕರ ವಾತಾವರಣವೂ ಇವುಗಳಿಗೆ ಅನುಕೂಲವಾಗಿದೆ. ಇಲ್ಲಿ ವರ್ಷಪೂರ್ತಿ ವಸಂತಕಾಲವೇ ಇರುತ್ತದೆ. ಹೀಗಾಗಿ ಜೇನುನೊಣಗಳ ಚಟುವಟಿಕೆ ಚುರುಕಾಗಿರುತ್ತದೆ.

ಒಂದು ವರ್ಷದ ಅವಧಿಯಲ್ಲಿ ಇಲ್ಲಿನ ಜೇನುನೊಣಗಳ ಒಂದು ಗುಂಪು 90ರಿಂದ 120 ಕೆ.ಜಿ. ಜೇನುತುಪ್ಪ ಉತ್ಪಾದಿಸುತ್ತದೆ. ಇದೇ ಪ್ರಮಾಣದ ಬೇರೆ ಪ್ರದೇಶದ ಜೇನುನೊಣಗಳಿಗೆ 20 ಕೆ.ಜಿ. ಜೇನುತುಪ್ಪ ಉತ್ಪಾದಿಸುವ ಸಾಮರ್ಥ್ಯ ಮಾತ್ರ ಇರುತ್ತದೆ ಎನ್ನಲಾಗಿದೆ. ಇಂಥ ಹಲವು ವೈಶಿಷ್ಟ್ಯಗಳ ಕಾರಣದಿಂದಲೇ ಈ ದ್ವೀಪದ ಅಪ್ಪಟ ಜೇನುತುಪ್ಪಕ್ಕಾಗಿ ಬಹುಬೇಡಿಕೆಯೂ ಕುದುರಿದೆ.

## ಈಸ್ಟರ್‌ಲ್ಯಾಂಡ್ ಹೆಡ್ಸ್

1250–500ರ ಅವಧಿಯಲ್ಲಿ ಮನುಷ್ಯರ ಮುಖಗಳನ್ನು ಹೋಲುವ ಶಿಲಾ ಪ್ರತಿಮೆಗಳನ್ನು ದೊಡ್ಡ ಬಂಡೆಗಳಲ್ಲಿ ಕೆತ್ತಿದ್ದು ಈಸ್ಟರ್ ಐಲ್ಯಾಂಡ್‌ನ ಅಲ್ಲಲ್ಲಿ ಕಂಡುಬಂದಿವೆ. ಈವರೆಗೆ 887 ಶಿಲಾ ಪ್ರತಿಮೆಗಳನ್ನು ಪತ್ತೆ ಮಾಡಲಾಗಿದೆ. ಸ್ಥಳೀಯ ಭಾಷೆಯಲ್ಲಿ 'ಮೋಯ್' ಎಂದು ಇವನ್ನು ಕರೆಯುತ್ತಾರೆ; ಪ್ರತಿಮೆ ಎಂಬುದು ಇದರ ಅರ್ಥ. ಇಲ್ಲಿನ ರಾನೊ ರಾರಾಕು ಜ್ವಾಲಾಮುಖಿಯಿಂದ ಉಕ್ಕಿದ ಲಾವಾದಿಂದಾಗಿ ಈ ಪ್ರತಿಮೆಯ ಕಲ್ಲುಗಳು ಸವೆದಿವೆ. 1914ರಲ್ಲಿ ಸಂಶೋಧಕರು ಎದೆಯ ಭಾಗದವರೆಗೆ ಕೆತ್ತನೆಗೊಂಡ ಶಿಲಾ ಪ್ರತಿಮೆಗಳನ್ನು ಪತ್ತೆ ಮಾಡಿದರು. ಅಲ್ಲಿಯವರೆಗೆ ಇವನ್ನು 'ಈಸ್ಟರ್‌ಲ್ಯಾಂಡ್ ಹೆಡ್ಸ್' ಎಂದೇ ಕರೆಯುತ್ತಿದ್ದರು. ಇವು 10ರಿಂದ 36 ಅಡಿಗಳಷ್ಟು ಎತ್ತರ ಇವೆ. ಸರಾಸರಿ 82 ಟನ್ ತೂಕವಿರುವ ಈ ಪ್ರತಿಮೆಗಳನ್ನು ಸಾಲಾಗಿ ಹಾಗೂ ಆಯ್ಕೆ ಮಾಡಿರುವ ಪ್ರದೇಶದಲ್ಲಿ ಯಾವುದೇ ತಂತ್ರಜ್ಞಾನವಿರದ ಕಾಲದಲ್ಲಿ ಹೇಗೆ ನಿಲ್ಲಿಸಿದರು ಎಂಬುದೇ ಕೌತುಕ.

'ಮೋಯ್'ಗಳನ್ನು ಸ್ಥಳೀಯರು ತಮ್ಮ ಪೂರ್ವಜರ ಪ್ರತೀಕವಾಗಿ ಭಾವಿಸುತ್ತಾರೆ. ಸಮುದ್ರಕ್ಕೆ ಮುಖ ಮಾಡಿ ನಿಲ್ಲಿಸಿರುವ ಈ ಪ್ರತಿಮೆಗಳು ತಮ್ಮ ದ್ವೀಪವನ್ನು ರಕ್ಷಿಸುತ್ತವೆ ಎಂಬ ನಂಬಿಕೆ ಅವರದ್ದು. 1995ರಲ್ಲಿ ಇದನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣವಾಗಿ ಘೋಷಿಸಿದೆ. ಇಲ್ಲಿನ ಕೆಲವು ಪ್ರತಿಮೆಗಳನ್ನು ಅಪಹರಿಸಿ ಇತರೆ ದೇಶಗಳಿಗೆ ಸಾಗಿಸಲಾಗಿದೆ.

ಪ್ರತಿವರ್ಷ ಇಲ್ಲಿನ ಬುಡಕಟ್ಟು ಸಂಪ್ರದಾಯದಂತೆ ತಪಾತಿ ರಪಾ ನ್ಯೂಯಿ ಹೆಸರಿನ ವಿಶಿಷ್ಟ ಉತ್ಸವ ನಡೆಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in